# ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ ಇವರು ನಿಯಮ-330 ರಡಿ ಮಂಡಿಸಿರುವ ಸೂಚನೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಉತ್ತರ

*****

**ವಿಷಯ:** ದಿನಾಂಕ:15.12.2023 ರಂದು ನನ್ನ ಪ್ರಶ್ನೆ ಸಂಖ್ಯೆ:987ಕ್ಕೆ ಸಂಬಂಧಿಸಿದಂತೆ ವಿಧಾನಸೌಧ, ವಿಕಾಸಸೌಧ ಮತ್ತು ಶಾಸಕರ ಭವನದ ಆವರಣದಲ್ಲಿ ವಿಶ್ವಕರ್ಮ ಸಮಾಜದ ಭಗವಾನ್ ವಿಶ್ವಕರ್ಮ ಅಥವಾ ಅಮರಶಿಲ್ಪಿ ಜಕಣಾಚಾರಿ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಸಚಿವರು ಉತ್ತರ ನೀಡಿರುವಂತೆ, ಚಾಲ್ತಿ ನಿಯಮಗಳನ್ವಯ ಅನುದಾನದ ಲಭ್ಯತೆಗೊಳಪಟ್ಟು ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ತೀರ್ಮಾನಿಸಿದಿಯೇ **(?)** ತೀರ್ಮಾನಿಸದಿದ್ದಲ್ಲಿ, ದೇಶಕ್ಕೆ ವಿಶ್ವಕರ್ಮ ಸಮಾಜ ನೀಡಿರುವ ಕೊಡುಗೆಗಳ ಕಡೆ ಗಮನವಿಲ್ಲವೇ ಅಥವಾ ಸಮಾಜದ ಬಗ್ಗೆ ಮಲತಾಯಿ ಧೋರಣೆಯೇ ದಯವಿಟ್ಟು ತಿಳಿಸುವ ಕುರಿತು ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ.

*****

**ಉತ್ತರ:** ಸರ್ಕಾರದ ಸುತ್ತೋಲೆ ಸಂಖ್ಯೆ:ಕಸಂವಾಪ್ರ/564/ಕಸಧ/2012, ದಿನಾಂಕ:11.06.2021ರಲ್ಲಿ ಸರ್ಕಾರದ/ಸಾರ್ವಜನಿಕ ಜಾಗದಲ್ಲಿ ಯಾವುದೇ ಸಂತರ/ ಶರಣರ, ಜನ ನಾಯಕರ, ಸ್ವಾತಂತ್ರ್ಯ ಹೋರಾಟಗಾರರ ಅಥವಾ ಗಣ್ಯ ವ್ಯಕ್ತಿಗಳ ಪ್ರತಿಮೆಗಳನ್ನು ಸ್ಥಾಪಿಸುವುದನ್ನು ನಿರ್ಬಂಧಿಸಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎಸ್.ಎಲ್.ಪಿ(ಸಿವಿಲ್)ಸಂಖ್ಯೆ:8519/2006 ಪ್ರಕರಣದಲ್ಲಿ ದಿನಾಂಕ:18.01.2013ರಂದು ನೀಡಿದ ತೀರ್ಪಿನಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಮೆ ಸ್ಥಾಪಿಸಲು ಸರ್ಕಾರವು ಅನುಮತಿ ನೀಡುವುದನ್ನು ನಿರ್ಬಂಧಿಸಿರುತ್ತದೆ.

ವಿಶ್ವಕರ್ಮ ಜಯಂತಿಯನ್ನು ಹಾಗೂ ಅಮರ ಶಿಲ್ಪಿ ಜಕಣಚಾರಿ ಜಯಂತಿಯನ್ನು ಪ್ರತಿ ವರ್ಷ ರಾಜ್ಯಾದ್ಯಂತ ಸರ್ಕಾರದಿಂದ ಆಚರಣೆ ಮಾಡಿಕೊಂಡು ಬರಲಾಗುತ್ತಿದ್ದು, ಸದರಿ ಮಹನೀಯರ ಕೊಡುಗೆಗಳ ಬಗ್ಗೆ ಸ್ಮರಣೆ ಮಾಡಿಕೊಳ್ಳುವ ಮೂಲಕ ಗೌರವಿಸಲಾಗುತ್ತಿದೆ.

ವಿಧಾನಸೌಧ, ವಿಕಾಸಸೌಧ ಮತ್ತು ಶಾಸಕರ ಭವನದ ಆವರಣದಲ್ಲಿ ವಿಶ್ವಕರ್ಮ ಸಮಾಜದ ಭಗವಾನ್ ವಿಶ್ವಕರ್ಮ ಅಥವಾ ಅಮರಶಿಲ್ಪಿ ಜಕಣಾಚಾರಿ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ ಚಾಲ್ತಿಯಲ್ಲಿರುವ ನಿಯಮಗಳನ್ವಯ ಹಾಗೂ 2023-24ನೇ ಸಾಲಿನ

..2...

R-330 SLNo:-(1)
Converted to 72



ಅನುದಾನದ ಲಭ್ಯತೆಗೊಳಪಟ್ಟು ಭಗವಾನ್ ವಿಶ್ವಕರ್ಮ ಅಥವಾ ಅಮರಶಿಲ್ಪಿ ಜಕಣಾಚಾರಿ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುವುದು.

ಕಡತ ಸಂಖ್ಯೆ: ಕಸಂವಾ 21 ಕವಿಸ 2024

**(ಶಿವರಾಜ.ಎಸ್.ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.